ಸರಕಾರಿ ರಜೆ ಘೋಷಿಸುವುದು

522 (297) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಈಗಾಗಲೇ ಎಷ್ಟು ಜನ ರಾಷ್ಟ್ರೀಯ ಮಹಾಪುರುಷರ ಜನ್ಮದಿನದಂದು ಸರ್ಕಾರಿ ರಜೆಯನ್ನು ಘೋಷಿಸಲಾಗಿದೆ.

ಆ) ಹಿಂದು ಸಾಮ್ರಾಜ್ಯದ ಸಂಸ್ಥಾಪಕರಾದ ಛತ್ರಪತಿ ಶಿವಾಜಿ ಮಹಾರಾಜರ ಜನ್ಮ ದಿನ (ಶಿವಜಯಂತಿ) ದಂದು ರಜೆ ಘೋಷಿಸಿ ಸರ್ಕಾರಿ ಕಾರ್ಯಕ್ರಮ ಆಚರಿಸಲು ಸರ್ಕಾರ ಯೋಚಿಸಿದೆಯೇ;

(ಇ) ಹಾಗಿದ್ದಲ್ಲಿ ಪ್ರಸಕ್ತ ಸಾಲಿನಲ್ಲಿಯೇ ಪ್ರಾರಂಭಿಸಬಹುದೇ

ಶ್ರೀ ಡಿ.ವಿ ಸದಾನಂದ ಗೌಡ (ಮಾನ್ಯ ಮುಖ್ಯಮಂತ್ರಿಗಳು)

(ಅ) 2011ನೇ ವರ್ಷದಲ್ಲಿ 6 ಪ್ರಮುಖ ವ್ಯಕ್ತಿಗಳ ಜಯಂತಿಗಾಗಿ ರಜೆ ನೀಡಲಾಗಿದೆ.

1. ಡಾ ll ಅಂಬೇಡ್ಕರ್ ಜಯಂತಿ
2. ಮಹಾವೀರ ಜಯಂತಿ
3. ಬಸವ ಜಯಂತಿ
4. ಗಾಂಧಿ ಜಯಂತಿ (ಭಾನುವಾರ)
5. ಮಹರ್ಷಿ ವಾಲ್ಮೀಕಿ ಜಯಂತಿ
6. ಕನಕದಾಸ ಜಯಂತಿ

(ಆ) ರಜಾ ಘೋಷಣೆ ಮಾಡುವ ಬಗ್ಗೆ ಸರ್ಕಾರ ಇನ್ನೂ ಯಾವುದೇ ನಿರ್ಣಯ ತೆಗೆದುಕೊಂಡಿರುವುದಿಲ್ಲ.

(ಇ) ಅನ್ವಯಿಸುವುದಿಲ್ಲ.

ಭಟ್ಟುಸಿಂಗ್ ಹುತಾತ್ಮರ ರಾಷ್ಟ್ರೀಯ ಸ್ಮಾರಕ

523 (745) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಜಮಖಂಡಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಹಾಗೂ ಹುತಾತ್ಮರಾದ ಛಟ್ಟಾಸಿಂಗ್ ಹಜಾರ್ ರವರ ಸ್ಮಾರಕದ ಹೆಸರು ಬದಲಾಯಿಸಿದ ವಕ್ಫ್ ಕಮಿಟಿ ನಡವಳಿಕೆಯ ಸತ್ಯಾಸತ್ಯತೆಯ ವರದಿ ಅರಿಯಲು ಸರ್ಕಾರ ಸಮಿತಿ ರಚಿಸಿದೆಯೇ;

(ಆ) ಹಾಗಿದ್ದಲ್ಲಿ, ವರದಿ ಸರ್ಕಾರದ ಕೈ ಸೇರಿದೆಯೇ;

(ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಈ) ಅದನ್ನೊಂದು ರಾಷ್ಟ್ರೀಯ ಸ್ಮಾರಕವೆಂದು ಘೋಷಿಸಬಹುದೇ?

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಮುಖ್ಯಮಂತ್ರಿಗಳು

(ಅ) ಹೌದು.

(ಆ) ಇಲ್ಲ

(ಇ) ಉದ್ಭವಿಸುವುದಿಲ್ಲ

(ಈ) ಇದೊಂದು ವಕ್ಫ್ ಸಂಸ್ಥೆಯಾಗಿದ್ದು, ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ ರಡಿಯ ಸಂರಕ್ಷಿತ ಸ್ಮಾರಕವಾಗಿರುವುದಿಲ್ಲ.

ಒಳಕ್ರೀಡಾಂಗಣ ಕಟ್ಟಡ ನಿರ್ಮಾಣ

524 (746) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಜಮಖಂಡಿಯ ಒಳ ಕ್ರೀಡಾಂಗಣ ಕಟ್ಟಡ ಕಾಮಗಾರಿ ಎಷ್ಟು ವರ್ಷಗಳಿಂದ ನೆನೆಗುದಿಗೆ ಬಿದ್ದಿತ್ತು?

(ಆ) ಈ ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು?

(ಇ) ಈ ಕಾಮಗಾರಿ ಪೂರ್ಣಗೊಳಿಸಲು ಎಷ್ಟು ಹಣ ಬೇಕಾಗುವುದು ಹಾಗೂ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಮುಖ್ಯಮಂತ್ರಿಗಳು

(ಅ) ಜಮಖಂಡಿ ಒಳಾಂಗಣ ಕ್ರೀಡಾಂಗಣ ಕಟ್ಟಡ ಕಾಮಗಾರಿ 2001–02ನೇ ಸಾಲಿನಲ್ಲಿ ಪ್ರಾರಂಭಗೊಂಡು ರೂ. 10.00 ಲಕ್ಷಗಳ ವೆಚ್ಚದಲ್ಲಿ ಬೇಸ್‌ಮೆಂಟ್‌ವರೆಗೆ ಕಾಮಗಾರಿ ಮುಗಿದಿದ್ದು, ಸದ್ಯಕ್ಕೆ ಕಾಮಗಾರಿ ಸ್ಥಗಿತಗೊಂಡಿರುತ್ತದೆ.